# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

SERVICE AND SAFETY

22 ವರ್ಷಗಳು 1994-2016



ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com    Email : ho@ramakrishnacredit.com



ಸಂಪುಟ : 1    ಸಂಚಿಕೆ : 4    ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ    ಜನವರಿ-ಮಾರ್ಚ್ 2016


## ಅಧ್ಯಕ್ಷರ ಮಾತು

## ಕೃತಜ್ಞತೆಗಳು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

**ವರ್ಷ 2015-16-'ಸಾಧನೆಯಿಂದ ಪ್ರೇರಿತ ಪ್ರಗತಿ'**
**(Growth driven by performance)**



**"ನೆಟ್ಟ ಗುರಿಯ, ಸಾಧನೆಯು ದಿಟ;**
**ಸಾರುತಿದೆ, ನಮ್ಮ ಪ್ರಗತಿಯು ಎಲ್ಲವನು ಸ್ಫುಟ"**

2015-16ನೇ ಸಾಲಿನಲ್ಲಿ ಸಂಘ ತನ್ನೆಲ್ಲಾ ಕಾರ್ಯವೈಖರಿಯಲ್ಲಿ ಗುರಿ ಮೀರಿದ ಸಾಧನೆ ಮಾಡಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

31.03.2016ಕ್ಕೆ ಠೇವಣಾತಿಯು ರೂ. 127 ಕೋಟಿ, ಹೊರಬಾಕಿ ಸಾಲ ರೂ. 95 ಕೋಟಿ, ರೂ. 3.80 ಕೋಟಿಗಿಂತ ಹೆಚ್ಚಿನ ನಿವ್ವಳ ಲಾಭ, ಸುಸ್ತಿ ಸಾಲವು ರೂ. 11 ಲಕ್ಷ ಹಾಗೂ ನಿವ್ವಳ ಅನುತ್ಪಾದಕ ಆಸ್ತಿ (NPA) 0% ಆಗಿರುತ್ತದೆ.

2015-16ನೇ ಈ ಅನನ್ಯ ಸಾಧನೆಗೆ ಸಹಕರಿಸಿದ ಸಂಘದ ಎಲ್ಲಾ ಸದಸ್ಯ ಬಾಂಧವರಿಗೆ, ಸಿಬ್ಬಂದಿಗಳಿಗೆ ಹಾಗೂ ಹಿತೈಷಿಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು. ಮುಂದಿನ ದಿನಗಳಲ್ಲಿ ಕೂಡ ತಮ್ಮಿಂದ ಇದೇ ರೀತಿಯ ಸಹಕಾರವನ್ನು ಆಶಿಸುತ್ತೇವೆ.

**ಕೆ. ಜೈರಾಜ್ ಬಿ. ರೈ**

## ಪ್ರಗತಿಯ ಪಕ್ಷಿನೋಟ

| ಕ್ರ. ಸಂ. | ಕಾರ್ಯ ವಿಭಾಗ | ದಿನಾಂಕ 31.03.2016 ಇದ್ದಂತೆ | | ದಿನಾಂಕ 31.03.2015ಕ್ಕೆ |
|---|---|---|---|---|
| | | ಗುರಿ | ಸಾಧನೆ | |
| 1 | ಠೇವಣಾತಿ | ₹ 125 Cr. | ₹ 127.07 Cr. | ₹ 118.32 Cr. |
| 2 | ಸಾಲ ಮತ್ತು ಮುಂಗಡ | ₹ 94 Cr. | ₹ 94.82 Cr. | ₹ 86.35 Cr. |
| 3 | ನಿವ್ವಳ ಲಾಭ | ₹ 2.92 Cr. | ₹ 3.80 Cr. | ₹ 2.82 Cr. |
| 4 | ಒಟ್ಟು ವ್ಯವಹಾರ | ₹ 219 Cr. | ₹ 222 Cr. | ₹ 205 Cr. |
| 5. | ಸುಸ್ತಿ ಸಾಲ | 0.12% | 0.12% | |
| 6. | ನಿವ್ವಳ ಅನುತ್ಪಾದಕ ಆಸ್ತಿ | 0% | 0% | 0% |

## ಸಂಘದ ಶಾಖಾ ವ್ಯವಸ್ಥಾಪಕರಿಗೆ ಕಾರ್ಯದಕ್ಷತೆ ತರಬೇತಿ ಕಾರ್ಯಕ್ರಮ



ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಲಿ. ಇವರ ಆಶ್ರಯದಲ್ಲಿ ದಿನಾಂಕ 15.01.2016ರಂದು ತರಬೇತಿ ಶಿಬಿರ ಜರಗಿತು. ಉದ್ಘಾಟನಾ ಸಮಾರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು ಮುಖ್ಯ ಅತಿಥಿಯಾಗಿ, ಸಭೆಯನ್ನು ಉದ್ದೇಶಿಸಿ ಮಾತನಾಡಿ, ಸಹಕಾರಿ ಸಂಘಗಳ ಸಿಬ್ಬಂದಿಗಳಿಗೆ ತಮ್ಮ ಕಾರ್ಯ ನಿರ್ವಹಣೆಯಲ್ಲಿ ವೃತ್ತಿಪರತೆಯನ್ನು ಬೆಳೆಸಿಕೊಳ್ಳಲು ತರಬೇತಿ ಕಾರ್ಯಗಳು ಅತ್ಯಗತ್ಯ. ಇಂತಹ ತರಬೇತಿಗಳನ್ನು ನಿಯತಕಾಲಿಕವಾಗಿ ಸಿಬ್ಬಂದಿಗಳಿಗೆ ನೀಡಿದಲ್ಲಿ ಸಹಕಾರ ಸಂಘಗಳ ಒಟ್ಟಾರೆ ಕಾರ್ಯನಿರ್ವಹಣೆಯು ಉತ್ತಮವಾಗುವುದು ಎಂದು ಅಭಿಪ್ರಾಯಪಟ್ಟರು.

ಈ ತರಬೇತಿ ಕಾರ್ಯಕ್ರಮದಲ್ಲಿ ವಿವಿಧ ಸಹಕಾರಿ ಬ್ಯಾಂಕು ಗಳು ಹಾಗೂ ಕ್ರೆಡಿಟ್ ಸಹಕಾರ ಸಂಘಗಳ ವ್ಯವಸ್ಥಾಪಕರು ಭಾಗವಹಿಸಿದ್ದರು.

ದ.ಕ. ಜಿಲ್ಲಾ ಸಹಕಾರಿ ಸಂಘಗಳ ಉಪನಿಬಂಧಕರಾದ ಶ್ರೀ ಬಿ.ಕೆ. ಸಲೀಂರವರು ತರಬೇತಿ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಗ್ರಾಹಕರ ಸೇವೆಯಲ್ಲಿ ವೃತ್ತಿಪರತೆ, ದಾಖಲಾತಿಗಳು ಹಾಗೂ ದಾಖಲೆಗಳ ನಿರ್ವಹಣೆ, ಆಸ್ತಿ ಮತ್ತು ಜವಾಬ್ದಾರಿಗಳ ನಿರ್ವಹಣೆ ಎಂಬ ವಿಷಯಗಳ ಬಗ್ಗೆ ವಿಷಯ ತಜ್ಞರುಗಳಾದ ಶ್ರೀ ಬಿ.ಎ. ಮಹದೇವಪ್ಪ ನಿವೃತ್ತ ಜಂಟಿ ನಿಬಂಧಕರು, ಶ್ರೀ ಮಹಾಬಲ ಡಿ. ನಿವೃತ್ತ ಜನರಲ್ ಮೆನೇಜರ್ ಶಿವಮೊಗ್ಗ ಡಿ.ಸಿ.ಸಿ ಬ್ಯಾಂಕ್, ಶ್ರೀ ವಸಂತ ಅಡ್ಯಂತಾಯ ನಿವೃತ್ತ ಬ್ಯಾಂಕ್ ಅಧಿಕಾರಿ ಇವರುಗಳು ಉಪನ್ಯಾಸಗಳನ್ನು ನೀಡಿದರು.

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಶ್ರೀ ಹರೀಶ್ ಆಚಾರ್‌ರವರು ಕಾರ್ಯಕ್ರಮ ಅಧ್ಯಕ್ಷತೆಯನ್ನು ವಹಿಸಿದ್ದರು ಹಾಗೂ ಯೂನಿಯನ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀಮತಿ ಸಾವಿತ್ರಿ ರೈಯವರು ಕಾರ್ಯಕ್ರಮವನ್ನು ನಿರ್ವಹಿಸಿ ವಂದನಾರ್ಪಣೆಯನ್ನು ಮಾಡಿದರು.

## ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಬಿ.ಸಿ. ಸತೀಶ್‌ರವರು ಸಂಘಕ್ಕೆ ಭೇಟಿ



ಶ್ರೀ ಬಿ.ಸಿ. ಸತೀಶ್, ಸಹಕಾರ ಸಂಘಗಳ ಜಂಟಿ ನಿಬಂಧಕರು ಪಟ್ಟಣ ಬ್ಯಾಂಕುಗಳ ವಿಭಾಗ ಇವರು ದಿನಾಂಕ 05.02.2016ರಂದು ಸಂಘಕ್ಕೆ ಭೇಟಿ ನೀಡಿದರು. ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು ಜಂಟಿ ನಿಬಂಧಕರನ್ನು ಹೂ ಹಾರ ಹಾಕಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಜಂಟಿ ನಿಬಂಧಕರು ಸಂಘದ ಪ್ರಗತಿ ವಿವರಗಳನ್ನು ಪರಿಶೀಲಿಸಿ, ಸಂಘವು ಠೇವಣಾತಿ ಮತ್ತು ಸಾಲ ಮುಂಗಡಗಳಲ್ಲಿ ಪ್ರಗತಿ, ಸಾಲ ವಸೂಲಾತಿ ಕ್ರಮಗಳ ಬಗ್ಗೆ ಮತ್ತು ಸುಸ್ತಿ ಸಾಲಗಳು ಕನಿಷ್ಠ ಪ್ರಮಾಣದಲ್ಲಿರುವ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಸಂಘವು ಪರಿವೀಕ್ಷಣೆ, ಶಾಖೆಗಳ ಭದ್ರತೆ ಬಗ್ಗೆ ಕೈಗೊಂಡಿರುವ ಕ್ರಮಗಳ ಮಾಹಿತಿ ಪಡಕೊಂಡು ತೃಪ್ತಿ ವ್ಯಕ್ತಪಡಿಸಿದರು. 22 ವರ್ಷಗಳ ಈ ಕಿರು ಅವಧಿಯಲ್ಲಿ ಸಂಘದ ಅಮೂಲಾಗ್ರ ಪ್ರಗತಿಯನ್ನು ಕಂಡು ಸಂಘವನ್ನು ಶ್ಲಾಘಿಸಿದರು.

ಜಂಟಿ ನಿಬಂಧಕರ, ಈ ಭೇಟಿ ಸಂದರ್ಭದಲ್ಲಿ ದ.ಕ. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕ ಶ್ರೀ ಬಿ.ಕೆ. ಸಲೀಂ ಮತ್ತು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಮಂಜುನಾಥರವರು ಉಪಸ್ಥಿತರಿದ್ದರು.

## ವೈವಾಹಿಕ



ಹೆಬ್ರಿ ಶಾಖೆಯ ಕ್ಲರ್ಕ್ ಚಿ| ಸೌ| ಜಯಲಕ್ಷ್ಮಿಯವರ ವಿವಾಹವು ಚಿ| ಮುರಳೀಧರ್‌ರೊಂದಿಗೆ ದಿನಾಂಕ **27.04.2016** ರಂದು ಜರಗಲಿದೆ. ವೈವಾಹಿಕ ಜೀವನಕ್ಕೆ ಕಾಲಿಡುತ್ತಿರುವ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.



ಸಂಘದ ಉಡುಪಿ ಶಾಖೆಯ ಅಕೌಂಟೆಂಟ್‌ರಾದ ಶ್ರೀ ಮಿಥುನ್‌ಚಂದ್ರರವರ ವಿವಾಹವು ಕು| ರಕ್ಷಿತಾರವರೊಂದಿಗೆ ದಿನಾಂಕ **24.04.2016**ರಂದು ಜರಗಲಿದೆ. ವೈವಾಹಿಕ ಜೀವನಕ್ಕೆ ಕಾಲಿಡುತ್ತಿರುವ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.

## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು ಮತ್ತು ಶಾಖೆ | |
|---|---|
| ಶ್ರೀಮತಿ ನಿರ್ಮಲ ಶೆಟ್ಟಿ, ಮೂಡಬಿದ್ರಿ | ಶ್ರೀ ಕುಂಞ, ಬಿ.ಸಿ.ರೋಡ್ |
| ಶ್ರೀಮತಿ ತುಳಸಿ, ಮುಲ್ಕಿ | ಶ್ರೀ ಮಹಾಬಲ ಶೆಟ್ಟಿ, ಬಿ.ಸಿ.ರೋಡ್ |
| ಶ್ರೀ ಸೂರಜ್ ಭಂಡಾರಿ, ಸುರತ್ಕಲ್ | ಶ್ರೀ ರಮೇಶ್ ಪಿ., ಸುಳ್ಯ |
| ಶ್ರೀ ಬಾಲಕೃಷ್ಣ ರೈ, ಪುತ್ತೂರು | ಶ್ರೀ ಪ್ರಭಾಕರ್, ಕುಂದಾಪುರ |
| ಶ್ರೀಮತಿ ಜ್ಯೋತಿ, ಕೇಂದ್ರ ಕಛೇರಿ | ಶ್ರೀಮತಿ ಉಷಾ ಬಿ., ಉಪ್ಪಿನಂಗಡಿ |
| ಶ್ರೀ ಮೋಹನ್‌ದಾಸ್ ಶೆಟ್ಟಿ, ಕೇಂದ್ರ ಕಛೇರಿ | ಶ್ರೀ ನವೀನ್‌ಕುಮಾರ್, ಮೂಡಬಿದ್ರಿ |
| ಶ್ರೀ ಶ್ರೀಹರ್ಷ ಡಿಎಸ್., ಉಪ್ಪಿನಂಗಡಿ | ಶ್ರೀ ಪ್ರಶಾಂತ್ ಪಿ.ಎ., ಕೇಂದ್ರ ಕಛೇರಿ |
| ಶ್ರೀ ಅಮರ್‌ನಾಥ್ ಹೆಗ್ಡೆ, ಬೈಂದೂರು | ಶ್ರೀ ನಾಗರಾಜ್‌ಎಚ್., ವಿಟ್ಲ |
| ಶ್ರೀಮತಿ ಜಯಂತಿ ಖಾರ್ವಿ, ಬೈಂದೂರು | ಶ್ರೀಮತಿ ಉಷಾ ಶೆಟ್ಟಿ, ಮಂಗಳೂರು |
| ಶ್ರೀಮತಿ ಅನಿತಾ ಎ., ಮುಲ್ಕಿ | ಶ್ರೀ ಮೋಹನ್‌ದಾಸ್ ಶೆಟ್ಟಿ, ಮಂಗಳೂರು |
| ಶ್ರೀ ಕರುಣಾಕರ್ ಶೆಟ್ಟಿ, ಪುತ್ತೂರು | ಶ್ರೀ ನಾಗರಾಜ್, ಬೈಂದೂರು |
| ಶ್ರೀ ಗಣೇಶ್ ಜಿ.ಕೆ., ಕೇಂದ್ರ ಕಛೇರಿ | ಶ್ರೀ ಹರೀಶ್ ಮೂಲ್ಯ, ಬಿ.ಸಿ.ರೋಡ್ |
| ಶ್ರೀ ಸೇಸಪ್ಪ ನ್ಯಾಕ್, ಪುತ್ತೂರು | ಶ್ರೀ ರಾಘವೇಂದ್ರ ರಾವ್, ಸುರತ್ಕಲ್ |
| ಶ್ರೀಮತಿ ಶ್ರೀಲತಾ ಶೆಟ್ಟಿ, ಹೆಬ್ರಿ | |

## ಅಭಿನಂದನೆಗಳು

ಸಂಘದ ಕುಂದಾಪುರ ಶಾಖಾಧಿಕಾರಿ ಶ್ರೀ ಪ್ರಭಾಕರ್‌ರವರು ಗಂಡು ಮಗುವಿನ ತಂದೆಯಾಗಿರುವರು. ಇವರಿಗೆ **ಹೃತ್ಪೂರ್ವಕ ಅಭಿನಂದನೆಗಳು.**

### ಸಂಘದ ಶಾಖೆಗಳಲ್ಲಿ ವಿವಿಧ ಉಪಕರಣ/ ತಂತ್ರಜ್ಞಾನಗಳ ಅಳವಡಿಕೆ

- ಸಂಘದ ಕೇಂದ್ರ ಕಛೇರಿ ಮತ್ತು ಶಾಖೆಗಳಲ್ಲಿ ಈ ತ್ರೈಮಾಸಿಕ ಅವದಿಯಲ್ಲಿ ವಿವಿಧಉಪಕರಣ / ತಂತ್ರಜ್ಞಾನಗಳನ್ನು ಅಳವಡಿಸಲಾಗಿದೆ.
- ಶಾಖೆಗಳ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲು ಹೆಚ್ಚುವರಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.
- ಸಂಘದ ವ್ಯವಹಾರಿಕ Computer Data ಗಳನ್ನು ಸಂರಕ್ಷಣೆಯನ್ನು ದಕ್ಷ ರೀತಿಯಲ್ಲಿ ನಿರ್ವಹಿಸಲು ಸಹಾಯಕವಾಗುವಂತೆ Unified Treat Management ಸಿಸ್ಟಂ (VPN/FIREWAL) ಗಳನ್ನು ಸಂಘದ ಕೇಂದ್ರ ಕಛೇರಿ ಮತ್ತು ಶಾಖೆಗಳಲ್ಲಿ ಅಳವಡಿಸಲಾಗಿದೆ.
- ಸಂಘದ ಸಿಬ್ಬಂದಿ ಹಾಜರಾತಿಯನ್ನು ಡಿಜಿಟಲೈಸ್ ಮಾಡಲು ಕೇಂದ್ರ ಕಛೇರಿ ಮತ್ತು ಶಾಖೆಗಳಲ್ಲಿ ಬಯೋಮೆಟ್ರಿಕ್ ಮೆಷಿನ್‌ಗಳನ್ನು ಅಳವಡಿಸಲಾಗಿದೆ.
- ಕೇಂದ್ರ ಕಛೇರಿಯಲ್ಲಿ ಸಂಘದ Dataಗಳ ಸಂರಕ್ಷಣೆಗಾಗಿ ಸರ್ವರ್ ರೂಂ ಪ್ರತ್ಯೇಕವಾಗಿ ರಚಿಸಲಾಗಿದೆ ಮತ್ತು ಕೇಂದ್ರ ಕಛೇರಿಯ Interior Furnishing ನ್ನು ನವೀಕರಿಸಲಾಗಿದೆ.

### ಮುಂದಿನ ಕಾರ್ಯಯೋಜನೆಗಳು

- ಬ್ರಹ್ಮಾವರ ಹಾಗೂ ತೊಕ್ಕೊಟ್ಟಿನಲ್ಲಿ ಹೊಸ ಶಾಖೆಗಳ ತೆರೆಯುಲು ಪೂರ್ವಭಾವಿ ಕೆಲಸಗಳನ್ನು ಆರಂಭಿಸಲಾಗಿದೆ.
- ಸಂಘದ ಕಾರ್ಕಳ ಶಾಖೆಯ ನವೀಕರಣದ ಪೂರ್ವಭಾವಿ ಕೆಲಸವನ್ನು ಆರಂಭಿಸಲಾಗಿದೆ.
- ಸಂಘದ ಮಂಗಳೂರು, ಸುಳ್ಯ, ಕುಂದಾಪುರ ಹಾಗೂ ಉಡುಪಿ ಶಾಖೆಗಳಲ್ಲಿ ಇ–ಸ್ಟಾಂಪಿಂಗ್ ಉಪಕೇಂದ್ರ ವನ್ನು ತೆರೆಯಲು ಶೀಘ್ರ ಅನುಮತಿಯ ನಿರೀಕ್ಷೆ ಯಲ್ಲಿದ್ದು ಶೀಘ್ರದಲ್ಲಿ ಚಾಲನೆ ನೀಡಲಾಗುವುದು.
- ಸಂಘಗಳ ಗ್ರಾಹಕರಿಗೆ ಪ್ರಯೋಜನಕ್ಕಾಗಿ ಸಂಘವು ನೀಡುವ ವಿವಿಧ ಸೇವೆಗಳಿಗೆ ಪೂರಕ ಮಾಹಿತಿ ತಿಳುವಳಿಕೆಗಳನ್ನು ನೀಡಲು SMS Alert ಸೌಲಭ್ಯವನ್ನು ಶೀಘ್ರದಲ್ಲಿ ಅನುಷ್ಠಾನಿಸಲಾಗುವುದು.

## ಕಾರ್ಯಕ್ರಮ




ದಿನಾಂಕ 20.03.2016ರಂದು ಮಂಗಳೂರಿನಲ್ಲಿ ಜರಗಿದ ಮಂಗಳೂರು ವ್ಹೀಲ್ಸ್‌ರವರ ಹೊಸ ಪ್ಯಾಸೆಂಜರ್ ಆಟೋರಿಕ್ಷಾ Ape City ಇದರ ಅನಾವರಣ ಕಾರ್ಯಕ್ರಮದಲ್ಲಿ ಸಂಘದ ಬಿಸಿನೆಸ್ ಕ್ಯಾಂಪನ್ನು ಆಯೋಜಿಸಿದ್ದು ಇದರಲ್ಲಿ ಚಿಲಿಂಬಿ ಶಾಖಾಧಿಕಾರಿ ಶ್ರೀ ತಿಮ್ಮಯ್ಯ ಶೆಟ್ಟಿ, ಮಂಗಳೂರು ಶಾಖಾಧಿಕಾರಿ ಶ್ರೀ ಮೋಹನ್‌ದಾಸ್ ಶೆಟ್ಟಿ ಹಾಗೂ ವೆಲೆನ್ಸೀಯ ಶಾಖಾಧಿಕಾರಿ ಶ್ರೀ ಚಂದ್ರಹಾಸ ಶೆಟ್ಟಿ ಭಾಗವಹಿಸಿದರು.



ದಿನಾಂಕ 29.03.2016ರಂದು ಪುತ್ತೂರಿನಲ್ಲಿ ಜರಗಿದ ಮಂಗಳೂರು ವ್ಹೀಲ್ಸ್‌ರವರ ಹೊಸ ಪ್ಯಾಸೆಂಜರ್ ಆಟೋರಿಕ್ಷಾ Ape City ಇದರ ಅನಾವರಣ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪುತ್ತೂರು ಶಾಖೆಯ ಶಾಖಾಧಿಕಾರಿ ಶ್ರೀ ಕರುಣಾಕರ್ ಶೆಟ್ಟಿಯವರು ಭಾಗವಹಿಸಿದರು.

## ಶ್ರದ್ಧಾಂಜಲಿ

### ಕಲ್ಲಾರೆ ಜಯರಾಮ ಶೆಟ್ಟಿ ನಿಧನ

**ಸಂಘದ ನಿರ್ದೇಶಕರಾದ ಶ್ರೀಮತಿ ಎ. ರತ್ನಕಾಂತಿ ಶೆಟ್ಟಿಯವರ ಪತಿ, ಶ್ರೀ ಕಲ್ಲಾರೆ ಜಯರಾಮ ಶೆಟ್ಟಿಯವರು ದಿನಾಂಕ 09.03.2016 ರಂದು ನಿಧನರಾದರು. ಇವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿ ಸಂಘದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.**

## ಶರೀರದ ಮೇಲೆ ಯೋಗದ ಪ್ರಭಾವ

ಯೋಗವೆಂದರೆ ನಮ್ಮ ಚೇತನ (ಅಸ್ತಿತ್ವ) ದ ಬೋಧೆ. ನಮ್ಮೊಳಗಿರುವ ಶಕ್ತಿಗಳನ್ನು ವಿಕಸಿತಗೊಳಿಸಿ ಪರಮಚೈತನ್ಯ ಆತ್ಮನೊಂದಿಗೆ ಸಾಕ್ಷಾತ್ಕಾರ ಹಾಗೂ ಪೂರ್ಣ ಆನಂದದ ಪ್ರಾಪ್ತಿ. ಈ ಯೌಗಿಕ ಪ್ರಕ್ರಿಯೆಯಲ್ಲಿ ವಿವಿಧ ಪ್ರಕಾರದ ಕ್ರಿಯೆಗಳ ವಿಧಾನವನ್ನು ನಮ್ಮ ಋಷಿಮುನಿಗಳು ಮಾಡಿದ್ದಾರೆ. ಇಲ್ಲಿ ನಾವು ಮುಖ್ಯವಾಗಿ ಅಷ್ಟಾಂಗಯೋಗ (ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧಾನ ಮತ್ತು ಸಮಾಧಿ)ದ ಅಂತರ್ಗತವಾಗಿ ವರ್ಣಿತವಾಗಿರುವ ಆಸನ ಮತ್ತು ಪ್ರಾಣಾಯಾಮಗಳ ವ್ಯಾಖ್ಯಾನವನ್ನು ಮಾಡುತ್ತೇವೆ. ಹಾಗೆಯೇ ಅದರ ಸಹಯೋಗಿಯಾದ ಹಠಯೋಗದ ಷಟ್ಕರ್ಮಾದಿಗಳ ವಿವರಗಳೂ ಇಲ್ಲಿ ನಿಮಗೆ ದೊರಕಲಿದೆ. ಈ ಎಲ್ಲಾ ಕ್ರಿಯೆಗಳಿಂದ ನಮ್ಮ ಸುಪ್ತ ಚೇತನ ಶಕ್ತಿಯ ವಿಕಾಸವಾಗುವುದು. ಸುಪ್ತ ತಂತುಗಳ ಪುನಶ್ಚೇತನ ಉಂಟಾಗುವುದು ಹಾಗೂ ಹೊಸ ತಂತುಗಳ ಕೋಶ (ಸೆಟ್ಸ್)ಗಳ ನಿರ್ಮಾಣವೂ ಆಗುವುದು.

ಯೋಗದ ಸೂಕ್ಷ್ಮ ಕ್ರಿಯೆಗಳ ಮೂಲಕ ನಮ್ಮ ಸೂಕ್ಷ್ಮ ಸ್ನಾಯು ತಂತುಗಳನ್ನು ಚುರುಕು ಗೊಳಿಸಲಾಗುವುದು. ಇದರಿಂದ ಅವುಗಳ ರಕ್ತ ಪರಿಚಲನೆ ಚೆನ್ನಾಗಿ ಆಗುವುದು ಮತ್ತು ನವಶಕ್ತಿಯ ವಿಕಾಸವಾಗ ತೊಡಗುವುದು. ಯೋಗದಿಂದ ರಕ್ತ ಪರಿಭ್ರಮಣವು ಉತ್ತಮ ರೀತಿಯಲ್ಲಿ, ಪೂರ್ಣಪ್ರಮಾಣದಲ್ಲಿ ನಡೆಯಲಾರಂಭಿಸುತ್ತದೆ. ಶರೀರ ವಿಜ್ಞಾನದ ಪ್ರಕಾರ, ಶರೀರದ ಅಕುಂಚನ–ವಿಕಸನವಾಗುವುದರಿಂದ ಅದರ ಶಕ್ತಿಯು ವರ್ಧಿಸಲ್ಪಡುವುದು ಹಾಗೂ ರೋಗ ನಿವಾರಣೆ ಆಗುವುದು.

ಯೋಗಾಸನಗಳಿಂದ ಈ ಪ್ರಕ್ರಿಯೆ ಸಹಜವಾಗಿಯೇ ಆಗುತ್ತದೆ. ಆಸನ ಹಾಗೂ ಪ್ರಾಣಾಯಾಮಗಳಿಂದ ಶರೀರದ ಗ್ರಂಥಿಗಳು ಹಾಗೂ ಮಾಂಸಖಂಡಗಳು ಆಕುಂಚನ–ಪ್ರಸಾರಣ ಹಾಗೂ ಶಿಥಿಳೀಕರಣದ ಕ್ರಿಯೆಗಳ ಮೂಲಕ ಅವುಗಳ ಆರೋಗ್ಯ ಹೆಚ್ಚುವುದು. ರಕ್ತವನ್ನು ಕೊಂಡೊಯ್ಯುವ ಅಪಧಮನಿಗಳು ಹಾಗೂ ಅಭಿಧಮನಿಗಳು ಸ್ವಸ್ಥವಾಗುತ್ತದೆ. ಆದುದರಿಂದ ಆಸನ ಹಾಗೂ ಅನ್ಯಯೌಗಿಕ ಕ್ರಿಯೆಗಳಿಂದ ಮೇದೋಜೀರಕ ಗ್ರಂಥಿ (ಪ್ಯಾನ್‌ಕ್ರಿಯಾಸ್) ಚುರುಕಾಗಿ ಕ್ರಿಯಾಶೀಲವಾಗುತ್ತದೆ. ಇದರಿಂದ ಮಧುಮೇಹ (ಡಯಾಬಿಟಿಸ್) ಮೊದಲಾದ ರೋಗಗಳು ದೂರವಾಗುತ್ತವೆ.

(ಮುಂದುವರಿಯುತ್ತದೆ)

Private Circulation only

**BOOK-POST**

**To,**

If not delivered please return to :
**SRI RAMAKRISHNA CREDIT CO-OP. SOCIETY LTD.**
2nd Floor, Amruthotsava Building, Bunts Hostel Circle, Mangalore - 575 003.